# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-152 ಎಸ್.ಜಿ.ಪಾಳ್ಯ ಕಛೇರಿಯಲ್ಲಿ ದಿನಾಂಕ: 02.01.2021 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-02-01-2021ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರ.ಸಂ. | ಹೆಸರು | ಮೊಬೈಲ್ ಸಂಖ್ಯೆ |
|---|---|---|
| 1 | ಶ್ರೀ.ಎಸ್.ಪ್ರಭಾಕರ್, ಮುಖ್ಯ ಅಭಿಯಂತರರು (ಪೂರ್ವ)ಬಿ.ಬಿ.ಎಂ.ಪಿ. | 9480685379 |
| 2 | ಶ್ರೀ.ಸತೀಶ್.ಡಿ ಸ.ಇಂ-152 ವಾರ್ಡ್ | 9964310730 |
| 3 | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| 4 | ಶ್ರೀ ಪುರುಷೋತ್ತಮ, (ಎಲೆಕ್ಟ್ರೀಕಲ್, ಬಿ.ಬಿ.ಎಂ.ಪಿ) | 9611177415 |
| 5 | ಶ್ರೀ. ಹರೀಶ್.ಹೆಚ್.ಪಿ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ | 9538897735 |
| 6 | ಶ್ರೀಮತಿ.ಆಶಾ.ಹೆಚ್. ಸಹಾಯಕ ಅಭಿಯಂತರರು ಬೇಸ್ಕಾಂ | 9900724229 |
| 7 | ಶ್ರೀ.ಗಂಗಾಧರ ವಾರ್ಡ್ ಮೇಲ್ವಿಚಾರಕರು | 9980225272 |
| 8 | ಶ್ರೀ ಸೈಯದ್ ನಜರೂದ್ದಿನ್, ಸದಸ್ಯರು | 9741518897 |
| 9 | ಶ್ರೀ.ಬಾಬು ಅರಣ್ಯ ಇಲಾಖೆ | 9480685399 |
| 10 | ಶ್ರೀ. ಸೆಲ್ವಕುಮಾರನ್ ಕಂದಾಯ ಪರಿವೀಕ್ಷಕರು | 9686301457 |
| 11 | ಶ್ರೀ ಮುನೇಂದ್ರ ವಾರ್ಡ್ ಮೇಲ್ವಿಚಾರಕರು ಘ.ತ್ಯಾ.ನಿ | 9901002067 |
| 12 | ಶ್ರೀ.ಕೆ ವೆಂಕಟೇಶ್‌ಬಾಬು | 9448684480 |
| 13 | ಶ್ರೀ ಭಿಮಪ್ಪ ಪಿ.ಎಸ್.ಐ ಎಸ್.ಜಿ.ಪಾಳ್ಯ ಪೊಲೀಸ್ ಠಾಣೆ | 9844631926 |
| 14 | ಶ್ರೀ ತಿಮ್ಮಗೌಡ ಎ.ಎಸ್.ಐ ಮಡಿವಾಳ ಪೊಲೀಸ್ ಠಾಣೆ | 9845644651 |
| 15 | ಶ್ರೀ.ಮಂಜುನಾಥ್.ಪಿ ವಾರ್ಡ್ ಮೇಲ್ವಿಚಾರಕರು ಘ.ತ್ಯಾ.ನಿ | 9740903427 |
| 16 | ಶ್ರೀ. ಕೃಷ್ಣ ಕೆಲಸ ಪರಿವೀಕ್ಷಕರು | 9845768405 |
| 17 | ಶ್ರೀ ಶಶಿಧರ್ ಸ.ಅ ರಸ್ತೆ ಮೂಲಭೂತ ಸೌಕರ್ಯ | 9341320868 |
| 18. | ಶ್ರೀ ಓಬ್ಲೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| 19 | ಶ್ರೀ.ವಿಷ್ಣು ಕುಮಾರ್ | 9845371963 |

1) ಸಭೆಯಲ್ಲಿ ಹಾಜರಿದ್ದ ಶ್ರೀ ಸೈದ್ ನಜರುದ್ದಿನ್ ರವರು 6ನೇ ಡಿ ಮುಖ್ಯರಸ್ತೆಯಲ್ಲಿ ಸಿ.ಸಿ.ಟಿ.ವಿ ಅಳವಡಿಸಬೇಕಾಗಿರುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು.

   ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ, ಸಿ.ಸಿ.ಟಿ.ವಿ ಅಳವಡಿಸುವ ಕಾಮಗಾರಿ ಪ್ರಕ್ರಿಯೆಯಲ್ಲಿರುತ್ತದೆ ಕೆಲವೇ ದಿನಗಳಲ್ಲಿ 6ನೇ ಡಿ ಮುಖ್ಯರಸ್ತೆಯಲ್ಲಿ ಸಿ.ಸಿ.ಟಿ.ವಿಯನ್ನು ಅಳವಡಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಹಾಗೂ ಸಿ.ಸಿ.ಟಿ.ವಿ ಕ್ಯಾಮರಗಳು ಯಾವ ಯಾವ ಸ್ಥಳಗಳಲ್ಲಿ ಅಳವಡಿಸಿರುವ ಬಗ್ಗೆ ಗುರುತಿಸಿ ಪೊಲೀಸ್ ಠಾಣೆಗೆ ವರದಿ ಸಲ್ಲಿಸಲು ಮಾನ್ಯ ಅಧ್ಯಕ್ಷರು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

2) ಕಳೆದ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಚರ್ಚಿಸಲಾಗಿದ್ದ ವಾರ್ಡ್ ವ್ಯಾಪ್ತಿಯಲ್ಲಿ ಪಾದಚಾರಿ ರಸ್ತೆಗಳು ಮತ್ತು ಶೌಚಲಯಗಳ ನಿರ್ಮಾಣದ ಅಗತ್ಯತೆಯ ಬಗ್ಗೆ ಸೂಕ್ತ ಸ್ಥಳವಕಾಶಗಳೊಂದಿಗೆ ಮಾಹಿತಿ ನೀಡಲು ಮತ್ತೊಮ್ಮೆ ಹಾಜರಾಗಿದ್ದ ಅಧಿಕಾರಿಗಳು ಮತ್ತು ಸದಸ್ಯರವರಿಗೆ ಮಹತಿಯನ್ನು ಕೇಳಲಾಗಿ, ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಮಾತನಾಡಿ ಸದ್ಯದಲ್ಲೇ ಮಾಹಿತಿಗಳನ್ನು ಕ್ರೂಢೀಕರಿಸಿ ಒದಗಿಸಲಾಗುವುದು ಎಂದು ತಿಳಿಸಿದರು.

3) ಮಾನ್ಯ ಅಧ್ಯಕ್ಷರು ಮಾತನಾಡಿ, ಭುವನಪ್ಪ ಬಡಾವಣೆ ಮತ್ತು ಸುತ್ತಮುತ್ತಲಿನ ಪ್ರದೇಶದ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತ ಚಟುವಟಿಗಳು ಹಾಗೂ ಧೂಮಪಾನ ನಿಷೇಧದ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಹಾಜರಿದ್ದ ಪೊಲೀಸ್ ಅಧಿಕಾರಿಗಳಿಗೆ ಕೇಳಲಾಗಿ, ಸಭೆಯಲ್ಲಿ ಹಾಜರಿದ್ದ ಪೊಲೀಸ್ ಅಧಿಕಾರಿಗಳು ಮಾತನಾಡಿ ಈ ಸಂಬಂಧ ಪ್ರತಿನಿತ್ಯ ಈ ತರಹದ ಚಟುವಟಿಕೆಗಳನ್ನು ಗುರುತಿಸಿ ಸ್ಥಳದಲ್ಲೇ ದಂಡವನ್ನು ವಸೂಲಾತಿ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಇದೆ ಸಂಧರ್ಭದಲ್ಲಿ ಶ್ರೀ ನಜರುದ್ದಿನ್ ಮಾತನಾಡಿ 6ನೇ ಅಡ್ಡರಸ್ತೆ ಬಾಲಾಜಿ ನಗರದಲ್ಲೂ ಧುಮಪಾನ ಹಾಗೂ ಅನಧಿಕೃತ ಚಟುವಟಿಗಳು ಹೆಚ್ಚಾಗಿ ಕಂಡುಬರುತ್ತಿದೆ ಎಂದು ತಿಳಿಸಿದರು. ಆಗ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಸಂಬಂಧ ಕೂಡಲೇ ಕಾನೂನು ರೀತ್ಯ ಕ್ರಮ ಜರುಗಿಸಲು ತಿಳಿಸಿದರು.

4) ಮಾನ್ಯ ಅಧ್ಯಕ್ಷರು ಮಾತನಾಡಿ, ತಾವರೆಕೆರೆ ಮುಖ್ಯರಸ್ತೆಯ ಕಾಮಗಾರಿಯ ಬಗ್ಗೆ ಪ್ರಸ್ತಾಪಿಸಲಾಗಿ, ಸಭೆಯಲ್ಲಿ ಹಾಜರಿದ್ದ ಶ್ರೀ.ಶಶೀದರ, ಸಹಾಯಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ ಕೇಂದ್ರ ಕಛೇರಿ, ರವರು ಮಾತನಾಡಿ ಸದರಿ ಕಾಮಗಾರಿಯ ಕಾರ್ಯದೇಶ ಪ್ರಕ್ರಿಯೆಹಂತದಲ್ಲಿದ್ದು, ಮುಂದಿನ ವಾರದೊಳಗಾಗಿ ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ತಿಳಿಸಿದರು.

5) ಮಾನ್ಯ ಅಧ್ಯಕ್ಷರು ಮಾತನಾಡಿ ಕಂದಾಯ ಸಂಗ್ರಹಣೆ ಬಗ್ಗೆ ವಿವರಗಳನ್ನು ಕೇಳಲಾಗಿ, ಸಭೆಯಲ್ಲಿ ಹಾಜರಿದ್ದ ಶ್ರೀ ಸೆಲ್ವಕುಮಾರ್, ಕಂದಾಯ ಪರಿವೀಕ್ಷರು ಮಾತನಾಡಿ ಪ್ರತಿವಾರ ಕನಿಷ್ಠ 300 ಆಸ್ತಿಗಳನ್ನು ಸರ್ವೆಮಾಡಬೇಕಾಗಿರುತ್ತದೆ, ಎಂದಿನಂತೆ ಕಂದಾಯ ಸಂಗ್ರಹಣೆ ಮಾಡಲಾಗುತ್ತಿರುತ್ತದೆ ಮತ್ತು ಪ್ರತಿ ಬುಧವಾರ ಕಂದಾಯ ಸಂಗ್ರಹಣೆ ಡ್ರೈವ್‌ನ್ನು ಆಯೋಜಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

6) ಕಳೆದ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ರವರು ಪ್ರಸ್ತಾಪಿಸಲಾಗಿದ್ದ ವಾರ್ಡ್ ವ್ಯಾಪ್ತಿಯಲ್ಲಿ ಹ್ಯಾಂಗಿಂಗ್ ಕೇಬಲ್ ಮತ್ತು ಓಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಲು ಪ್ರತಿವಾರ ಡ್ರೈವ್‌ನ್ನು ಹಮ್ಮಿಕೊಳ್ಳಲು ವಾರ್ಡ್ ಅಭಿಯಂತರರಿಗೆ ತಿಳಿಸಿದ್ದರು. ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಹ್ಯಾಂಗಿಂಗ್ ಕೇಬಲ್ ಮತ್ತು ಓಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

7) ಮಾನ್ಯ ಅಧ್ಯಕ್ಷರು ಮಾತನಾಡಿ, ಸೆಂಟಜಾನ್ಸ್ ರಸ್ತೆಯಲ್ಲಿ ರಸ್ತೆ ಅಗೆತದ ಬಗ್ಗೆ ಮಾತನಾಡಿ ಹಲವುದಿನಗಳಿಂದ ಗುಂಡಿ ಹಾಗೆಯೇ ಬಿದ್ದಿದ್ದು, ವಾಹನ ಸವಾರರಿಗೆ ತುಂಬಾ ತೊಂದರೆಯಾಗುತ್ತಿದ್ದು, ಕೂಡಲೇ ಗುಂಡಿ ಮುಚ್ಚುವ ಕಾಮಗಾರಿಯನ್ನು ಕೈಗೊಳ್ಳಲು ವಾರ್ಡ್ ಅಭಿಯಂತರರಿಗೆ ತಿಳಿಸಿದರು.

8) ಮಾನ್ಯ ಅಧ್ಯಕ್ಷರು ಕಸವಿಲೇವಾರಿ ಬಗ್ಗೆ ಪ್ರಸ್ತಾಪಿಸಲಾಗಿ, ಸಭೆಯಲ್ಲಿ ಹಾಜರಿದ್ದ ಶ್ರೀ ಅಜಯ್, ಹಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ, ಪ್ರತಿನಿತ್ಯ 4.50 ಟನ್ ಹಸಿ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಚಿಕ್ಕನಾಗಮಂಗಲ ಘಟಕ್ಕೆ ವಿಲೇವಾರಿ ಮಾಡಲಾಗುತ್ತದೆ ಹಾಗೂ 8.00 ಟನ್ ಮಿಶ್ರ ತ್ಯಾಜ್ಯ ಬೆಳ್ಳಳ್ಳಿ ಘಟಕಕ್ಕೆ ವಿಲೇವಾರಿ ಮಾಡಲಾಗುತ್ತಿರುತ್ತದೆ ಹಾಗೂ ವಾರದ ಬುಧವಾರ ಮತ್ತು ಶನಿವಾರ ಒಣತ್ಯಾಜ್ಯವನ್ನು ಮನೆ ಮನೆಗಳಿಂದ ಸಂಗ್ರಹಿಸಿ ಒಣತ್ಯಾಜ್ಯ ಸಂಸ್ಕರಣೆ ಘಟಕ್ಕೆ ವಿಲೇವಾರಿ ಮಾಡಲಾಗುತ್ತಿರುತ್ತದೆ ಮತ್ತು ಶ್ರೀ ಓಬಳೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು ಮಾತನಾಡಿ ವಾಣಿಜ್ಯ ತ್ಯಾಜ್ಯ ಪ್ರತಿ ನಿತ್ಯ 0.75 ಟನ್ ಉತ್ಪತ್ತಿಯಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ, ಅದ್ಯಕ್ಷರು ಮಾತನಾಡಿ, ಈ ಸಭೆಗೆ ಗೈರಾದ ಅಧಿಕಾರಿಗಳ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ತಿಳಿಸುತ್ತಾ, ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

S. Prabhakar
(ಶ್ರೀ. ಎಸ್.ಪ್ರಭಾಕರ್)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ